ಆ) ಈ ಅವಧಿಯಲ್ಲಿ ರಾಜ್ಯ ಸರ್ಕಾರವು ರೂ.1757.90 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಕೇಂದ್ರ ಸರ್ಕಾರದಿಂದ ರೂ.1757.90 ಲಕ್ಷಗಳ ಸಹಾಯ ಧನ ಬಿಡುಗಡೆಯಾಗಿರುತ್ತದೆ. ವಾಂಬೆ ನಿಯಮಗಳ ಪ್ರಕಾರ ರಾಜ್ಯ ಸರ್ಕಾರವು ಶೇಕಡ 50 ರಷ್ಟು ತನ್ನ ಪಾಲಿನ ಮ್ಯಾಚಿಂಗ್ ಅನುದಾನವನ್ನು ಅಂದರೆ ರೂ.1757.90 ಲಕ್ಷಗಳನ್ನು ನೀಡುರುತ್ತದೆ.

ಇ) ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ಜವಹರ್ ಲಾಲ್ ನೆಹರು ನಗರ ನವೀಕರಣ ಯೋಜನೆ (JNNURM) ಮತ್ತು ಸಮಗ್ರ ವಸತಿ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ (IHSDP) ಯಡಿಯಲ್ಲಿ ಮನೆಗಳ ನಿರ್ಮಾಣದ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಿದ್ದು, ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ಯೋಜನೆ	ಮನೆಗಳ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ಸಹಾಯ ಧನ
1	JNNURM	14391	23445.33	2876.32
2	IHSDP	8348	12455.56	2094.94

ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :-

1057 (1511) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ಗ್ರಾಮ ಪಂಚಾಯ್ತಿಗಳು ಬರುತ್ತವೆ;

ಆ) ಈ ಗ್ರಾಮ ಪಂಚಾಯ್ತಿಗಳ ಪೈಕಿ ಯಾವ ಯಾವ ಗ್ರಾಮ ಪಂಚಾಯಿತಿಗಳಲ್ಲಿ ಅವ್ಯವಹಾರಗಳು ಪತ್ತೆಯಾಗಿವೆ; (ಅವ್ಯವಹಾರಗಳ ಬಗ್ಗೆ ವಿವರ ಒದಗಿಸುವುದು) ಈ ಅವ್ಯವಹಾರಗಳಲ್ಲಿ ಭಾಗಿಯಾಗಿರುವವರ ಹೆಸರು ವಿವರಗಳೇನು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-

ಅ) 30 ಗ್ರಾಮ ಪಂಚಾಯ್ತಿಗಳು ಬರುತ್ತವೆ. 1. ದನ್ನೂರ (ಕೆ) 2. ಬೆಟಬಾಲಕುಂದ 3. ಕಿಟ್ಟ 4. ನಾರಾಯಣಪುರ 5. ಪರತಾಪೂರ 6. ರಾಜೇಸ್ವರ 7. ತಡೋಲಾ 8. ಇಸ್ಲಾಂಪುರ 9. ಯರಬಾಗ್ 10. ನೀರಗುಡಿ 11. ಯರಂಡಿ 12. ಖೇರ್ಡಾ (ಬಿ) 13. ರಾಜೋಳ 14. ಮೊರಖಂಡಿ 15. ಉಜಳಂಬ 16. ಮಂಟಾಳ 17. ಸಸ್ತಾಪುರ 18. ಅಲಗೂಡ 19. ಗುಂಡೂರು 20. ಗೋಟಾಳ 21.

ಚಂಡಕಾಪುರ 22. ಮುಡಬಿ 23. ಎಕಲೂರು 24. ಹಾರಕೂಡ 25. ಕಲಕೋರ 26. ಕೊಹಿನೂರ 27. ಬಟಗೇರಾ 28. ಲಾಡವಂತಿ 29. ಬೋಸಗಾ 30. ಮಂಚಲಮ್

ಆ) 1) ಕಿಟ್ಟ ಗ್ರಾ.ಪಂ.:– ಅಧ್ಯಕ್ಷರಾದ ಶ್ರೀ ಮಲ್ಲರೆಡ್ಡಿ ಬಸರೆಡ್ಡಿ
2) ರಾಜೇಸ್ವರ ಗ್ರಾ.ಪಂ.:– ಅಧ್ಯಕ್ಷರಾದ ಶ್ರೀ ಶಂಕರ ಮಲ್ಲಪ್ಪ ಹಾಗೂ ಕಾರ್ಯದರ್ಶಿಯಾದ ಶ್ರೀ ವಿಜಯ ಕುಮಾರ್ ಜಗತಾಪ

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :–

1058 (1407) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಹುನಗುಂದ ತಾಲ್ಲೂಕಿನ ಚಿಕ್ಕಮಾಗಿಯಿಂದ ಹಿರೇಮಾಗಿಯ ಮಧ್ಯೆ ಮಲಪ್ರಭಾ ನದಿಗೆ ಬ್ಯಾರೇಜ್ ಕಂ ಬ್ರಿಡ್ಜ್ ನಿರ್ಮಾಣ ಕಾರ್ಯ ಸರ್ಕಾರದ ಗಮನಕ್ಕಿದೆಯೇ;

ಆ) ಈ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಇ) ಈ ಕಾಮಗಾರಿಗೆ ಮಂಜೂರಾತಿ ದೊರೆತಿದ್ದಲ್ಲಿ ಕಾರ್ಯ ಪ್ರಾರಂಭಕ್ಕೆ ವಿಳಂಬವೇಕೆ; (ವಿವರ ನೀಡುವುದು)?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :–

ಅ) ಕಾಮಗಾರಿಯ ಬಗ್ಗೆ ಗಮನಕ್ಕೆ ಬಂದಿದೆ. ಆದರೆ, ಈ ಕಾಮಗಾರಿಯು ಬ್ರಿಡ್ಜ್ ಕಂ ಬ್ಯಾರೇಜ್ ಆಗಿರದೆ ಕೇವಲ ಬ್ಯಾರೇಜ್ ಕಾಮಗಾರಿ ಆಗಿರುತ್ತದೆ.

ಆ) ಸದರಿ ಬ್ಯಾರೇಜಿನ ಸಾಧ್ಯತಾ ವರದಿಗೆ ಮುಖ್ಯ ಇಂಜಿನೀಯರ್, ನೀರಾವರಿ (ಉತ್ತರ), ಬೆಳಗಾಂ ಇವರಿಂದ ಅನುಮೋದನೆ ನೀಡಲಾಗಿದ್ದು, ವಿವರವಾದ ವಿನ್ಯಾಸ, ನಕ್ಷೆ ಹಾಗೂ ಅಂದಾಜು ಪತ್ರಿಕೆಯನ್ನು ಖಾಸಗಿ ಸಲಹೆಗಾರರಾದ ಮೆ॥ ಏಬಲ್ ಇಂಜಿನಿಯರಿಂಗ್, ಬೆಂಗಳೂರು ಇವರಿಂದ ತಯಾರಿಸಲ್ಪಡುತ್ತಿದೆ.

ಇ) ಈ ಕಾಮಗಾರಿಯ ವಿವರವಾದ ಅಂದಾಜು ತಯಾರಿಕೆಯ ಕಾರ್ಯವು ಇನ್ನೂ ಪೂರ್ಣಗೊಳ್ಳದಿರುವುದರಿಂದ, ಅಂದಾಜಿಗೆ ತಾಂತ್ರಿಕ ಮಂಜೂರಾತಿ ದೊರೆತಿರುವುದಿಲ್ಲ. ಆದುದರಿಂದ, ಕಾಮಗಾರಿಯು ಪ್ರಾರಂಭಗೊಂಡಿರುವುದಿಲ್ಲ.

ಶ್ರೀ ನರೇಂದ್ರ ಬಾಬು ನೆ.ಲ. (ರಾಜಾಜಿನಗರ) :–

1059 (519) ಮಾನ್ಯ ವಸತಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–